ಚಿಲ್ಲರೆ ಕಳ್ಳರಾಗಿರಬೇಕು. ಯಾಕೆಂದರೆ, ಮರುದಿನ ಬೆಳಿಗ್ಗೆ ನೋಡುವಾಗ, ಜ್ಯೂಸ್ ತಯಾರಿಗೆಂದು ತಂದಿರಿಸಿದ ಹಣ್ಣುಗಳು, ಕೆಲವು ತಿಂಡಿಗಳು, ನೀರಿನ ಬಾಟಲುಗಳು ಕಳವಾಗಿದ್ದವಂತೆ. ಹಿಂದಿನ ಬಾಗಿಲು ಮುರಿದಿತ್ತಂತೆ. ಪುಟ್ಟ ಕಳವಾದ್ದರಿಂದ ಬೋಪಣ್ಣ ಪೊಲೀಸರಿಗೆ ದೂರು ಕೊಡಲಿಲ್ಲವಂತೆ.

"ಡಿಸೋಜ, ನಾವೊಮ್ಮೆ ಬೋಪಣ್ಣನ ಮನೆಗೆ ಹೋಗೋಣವೇ?"

ನಾವು ಸುಮಾರು ಒಂದು ತಾಸಿನಲ್ಲಿ ಬೋಪಣ್ಣನ ಮನೆಯಲ್ಲಿದ್ದೆವು. ಸಾಧಾರಣವಾದ ಹೆಂಚಿನ ಮನೆ. ಪಕ್ಕದಲ್ಲಿ ಕಾರು ನಿಲ್ಲಿಸಲು ಗ್ಯಾರೇಜು. ನಮ್ಮನ್ನು ಕಂಡು ಕುಮುದನಿಗೆ ಅಚ್ಚರಿ.

"ಸಾರ್, ಏನಾದ್ರೂ ಸುಳಿವು ಸಿಕ್ತಾ?"

"ಇನ್ನೂ ಇಲ್ಲಮ್ಮ. ಅದಕ್ಕಾಗಿಯೇ ಇವರನ್ನು ಕರೆ ತಂದಿದ್ದೇನೆ." ಹಾಗೆಂದು ನಮ್ಮ ಪರಿಚಯಿಸಿದ ಡಿಸೋಜ.

"ಇವರ ಬಗ್ಗೆ ಕೇಳಿದ್ದೀನಿ. ಕೂತ್ಕೊಳ್ಳಿ," ಕುಮುದ ಕುರ್ಚಿಯ ಮೇಲಿರಿಸಿದ್ದ, ತಾನು ಕತ್ತರಿಸುತ್ತಿದ್ದ ತರಕಾರಿಯ ಬಟ್ಟಲನ್ನು ಎತ್ತಿ ಮೇಜಿನ ಮೇಲಿರಿಸಿದಳು.

ಮಧ್ಯಮ ವರ್ಗದ ಮನೆ. ಹಳೆಯ ಮರದ ಪೀಠೋಪಕರಣಗಳು. ಅಂದಗೆಟ್ಟ ಗೋಡೆ. ಮರದ ಶೋಕೇಸಿನಲ್ಲಿ ಹತ್ತಾರು ವಸ್ತುಗಳು. ಅಲ್ಲಿ ತುಸು ಹೊಸತಿನಂತೆ ಇದ್ದಿದ್ದು, ಕಿಟಕಿಯಲ್ಲಿದ್ದ ಪರದೆ ಮಾತ್ರ!

"ಅವರಿಗೆ ಏನಾಗಿದೆಯೋ? ನನ್ಗೆ ಭಯವಾಗ್ತಿದೆ." ಆಕೆ ಜೋರಾಗಿ ಬಿಕ್ಕಿದಳು.

"ಚಿಂತಿಸಬೇಡಿ. ಅವರನ್ನ ಪತ್ತೆ ಮಾಡೋಣ. ಬೋಪಣ್ಣ ಅವರ ಕಾಗದ ಪತ್ರಗಳು ಏನಾದರೂ ಇವೆಯೇ?" ಕರಮಚಂದ ಧೈರ್ಯ ತುಂಬಿದ.

"ಬನ್ನಿ. ಬೆಡ್ ರೂಮಲ್ಲೇ ಎಲ್ಲಾ ಇರೋದು."

ಆಕೆ ನಮ್ಮನ್ನು ಪಕ್ಕದ ಕೋಣೆಗೆ ಕರೆದೊಯ್ದಳು. ಅಷ್ಟೇನೂ ವಿಸ್ತಾರವಲ್ಲದ ಕೊಠಡಿ. ಎಡಭಾಗದಲ್ಲಿ ಗೋಡೆಗೆ ಅಂಟಿಕೊಂಡು ಮಂಚ. ಅದರ ಮೇಲೆ ಮಾಸಲು ಬಟ್ಟೆ ಹೊದಿಸಿದ ಹಾಸಿಗೆ. ಬಣ್ಣಗೆಟ್ಟ ಗೋಡೆಯಲ್ಲಿ ರೇಖೆ ಎಳೆದಂತೆ ಕಲೆ. ಮೇಲಿನ ಅಟ್ಟದಲ್ಲಿ ಬಟ್ಟೆಗಳ ಗಂಟು, ಮುರಿದ ಕುರ್ಚಿ. ಇನ್ನು ಏನೇನೋ. ಮಂಚದ ಪಕ್ಕದ ಮೇಜಿನಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿದ ಪುಸ್ತಕಗಳು, ಪೆನ್ನು ಸ್ಟ್ಯಾಂಡ್, ಬಾಚಣಿಗೆ, ಕ್ಲಿಪ್ಪು, ಇತ್ಯಾದಿಗಳು.

"ನೋಡಿ, ಅದು ಅವರು ಹೆಚ್ಚಾಗಿ ಉಪಯೋಗಿಸುವ ಮೇಜು. ಅಲ್ಲೇ ಅವರ ದಾಖಲೆ ಪತ್ರಗಳು, ಪರ್ಸು ಎಲ್ಲಾ ಇವೆ." ಕುಮುದ ಬಲಭಾಗದಲ್ಲಿ, ಕಪಾಟಿನ ಸನಿಹವಿದ್ದ, ಮೇಜು ಕುರ್ಚಿ ತೋರಿದಳು. ಮೇಜಿನ ಮೇಲೆ ಒಂದು ಜೀರ್ಣವಾದ ಪೊಲಿಥಿನ್ ಹ್ಯಾಂಡ್ ಪರ್ಸ್ ಇತ್ತು. ಕರಮಚಂದ ಅದನ್ನು ತೆರೆದು ಪರಿಶೀಲಿಸಿದ. ಅದರಲ್ಲಿ ಕೀ ಗೊಂಚಲು, ಒಂದಿಷ್ಟು ನಗದು, ಕೆಲವು ಕಾಗದದ ಚೀಟಿಗಳು, ಚೆಕ್ ಪುಸ್ತಕ ಇದ್ದವು. ಕರಮಚಂದ ಎಲ್ಲವನ್ನೂ ಗಮನವಿಟ್ಟು ನೋಡಿದ. ನಾನು ಮೇಜಿನ ಮೇಲಿದ್ದ ಪಾಸ್ ಬುಕ್ ನೋಡಿದೆ. ದೊಡ್ಡ ಮೊತ್ತದ ಶಿಲ್ಕು ಇರಲಿಲ್ಲ. ಒಂದೆರಡು ಬ್ಯಾಂಕ್ ಚಾರ್ಜುಗಳಿದ್ದವು, ಚೆಕ್ ಬೌನ್ಸ್ ಆಗಿದ್ದಕ್ಕೆ! ನಾನು ಅದರ ಫೋಟೋವನ್ನು ಮೊಬೈಲಿನಲ್ಲಿ ತೆಗೆದೆ.

"ನಿಮ್ಮ ಯಜಮಾನರ ಹೋಟೆಲಿಗೆ ಬಾಡಿಗೆ ಎಷ್ಟು?"

"ಹತ್ತು ಸಾವಿರ."

"ನಿಮ್ಮ ಯಜಮಾನರಿಗೆ ಓದುವ ಹುಚ್ಚಿದೆಯಲ್ವೇ?"

ಆಕೆ ಅಷ್ಟು ಹೊತ್ತಿಗೆ ಮೇಜಿನ ಮೇಲೆ ಹರಡಿದ್ದ ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದಳು.

"ಹೌದು. ಅವರಿಗೆ ಐತಿಹಾಸಿಕ ಕಾದಂಬರಿಗಳೆಂದರೆ ಇಷ್ಟ."

ಕರಮಚಂದ ಕೆಲವು ಪುಸ್ತಕಗಳನ್ನು ತೆರೆದು ನೋಡಿದ. ಅಲ್ಲೇ ಇದ್ದ ಪೆನ್ ಸ್ಟ್ಯಾಂಡಿನಲ್ಲಿ ಎರಡು ಪೆನ್ನುಗಳಿದ್ದವು. ಒಂದರಲ್ಲಿ ರೀಫಿಲ್ ಖಾಲಿಯಾಗಿತ್ತು. ಇನ್ನೊಂದು ಫೌಂಟೇನ್ ಪೆನ್ನಿನ ನಿಬ್ಬು ಮುರಿದಿತ್ತು! ಕರಮಚಂದ ಮೇಜನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ, ಅದರ ಸೆಳೆಖಾನೆಯಲ್ಲಿ ಹುಡುಕಿದ. ಎಲ್ಲೂ ಏನೂ ವಿಶೇಷವಾದದ್ದು ಗೋಚರಿಸಲಿಲ್ಲ.

"ಡಿಸೋಜ, ನಾವು ಮನೆಗೆ ಒಮ್ಮೆ ಸುತ್ತು ಹಾಕಿ ಬರ್ತೇವೆ."

ಅಷ್ಟೇನೂ ದೊಡ್ಡದಾದ ಜಾಗವಲ್ಲ. ತರಕಾರಿ, ಹೂವಿನ ಗಿಡಗಳಿದ್ದವು. ಗ್ಯಾರೇಜಿನಲ್ಲಿ ಹಳೆಯದಾದ ಮಾರುತಿ ಕಾರು. ನಾವು ಹುಡುಕಾಟ ನಡೆಸುವಾಗ, ಪಕ್ಕದ ವಠಾರದಲ್ಲಿ ನಮ್ಮತ್ತ ಕುತೂಹಲದ ದೃಷ್ಟಿ ಬೀರುತ್ತಾ ನಿಂತಿದ್ದ ವ್ಯಕ್ತಿಯೊಡನೆ ಕರಮಚಂದ ಮಾತಿಗಿಳಿದ. ತಿಮ್ಮರಾಜು ಎಂದು ತನ್ನನ್ನು ಪರಿಚಯಿಸಿಕೊಂಡ ಆತ ಒಂದೆರಡು ಆಸಕ್ತಿಕರ ವಿಷಯ ತಿಳಿಸಿದ.

ಬೋಪಣ್ಣ ನಾಪತ್ತೆಯಾಗುವ ಕೆಲವು ದಿನಗಳ ಮೊದಲು, ರಾತ್ರಿ ಬೋಪಣ್ಣ ತಾನೊಬ್ಬನೇ ಕಾರು ಚಲಾಯಿಸಿಕೊಂಡು ಬಂದಿದ್ದನ್ನು ಕಂಡಿದ್ದನಂತೆ. ಆದರೆ ಆತ ಕಾರನ್ನು ಗ್ಯಾರೇಜಿನಲ್ಲಿ ಇರಿಸಿ, ಮನೆಯೊಳಗೆ ಹೋಗುವಾಗ ಆತನೊಂದಿಗೆ ಇನ್ನೊಬ್ಬ ಇದ್ದಂತೆ ಅನ್ನಿಸಿತಂತೆ. ಯಾವಾಗಲೂ ಹೊರಗಡೆಯ ದೀಪ ಹಾಕುವ ಬೋಪಣ್ಣ ಆ ದಿವಸ ದೀಪ ಹಾಕಲೇ ಇಲ್ಲವಂತೆ! ಇನ್ನೊಂದು, ಕಳೆದ ಒಂದೆರಡು ದಿನಗಳಲ್ಲಿ, ರಾತ್ರಿ ಒಂದಿಬ್ಬರು ಅಪರಿಚಿತರು, ಬೋಪಣ್ಣನ ಮನೆಯ ಸುತ್ತ ಮುತ್ತ ಸುಳಿದಾಡುತ್ತಿದ್ದನ್ನು ಕಂಡಿದ್ದಾನಂತೆ!

ನಾವು ಮನೆಯೊಳಗೆ ಮರಳಿದಾಗ, ಕುಮುದ ಮಾತು ಸೇರಿಸಿದಳು,

"ತಿಮ್ಮರಾಜು ನಿಮ್ಮ ತಲೆ ತಿಂದಿರಬಹುದು! ಅವ್ನಿಗೆ ನಮ್ಮನ್ನು ಕಂಡರೆ ಆಗುವುದಿಲ್ಲ. ನಮ್ಮ ಮನೆಯ ಹಿಂದೆ ಆತನ ಜಾಗವಿದೆ. ಅದಕ್ಕೆ ದಾರಿಯಿಲ್ಲ. ನಮ್ಮಲ್ಲಿ ದಾರಿಗಾಗಿ ಜಾಗ ಕೇಳ್ತಾ ಇದ್ದಾನೆ. ನಾವು ಕೊಟ್ಟಿಲ್ಲ."

"ನಾನು ಸ್ವಲ್ಪ ನೀರು ಕುಡಿಯಲೇ?. ನೀವು ಕೂತಿರಿ. ನಾನೇ ತೆಗೆದುಕೊಳ್ತೀನಿ." ಹಾಗೆಂದು ಸಲಿಗೆಯಿಂದ ಕರಮಚಂದ ಅಡುಗೆಕೋಣೆಗೆ ಹೋಗಿ ನೀರು ಕುಡಿದು ಬಂದ.

"ಏನಾದ್ರೂ ಸುಳಿವು ಸಿಕ್ತಾ, ಸರ್?"

"ನೀವು ಚಿಂತೆ ಮಾಡ್ಬೇಡಿ. ಬೋಪಣ್ಣನ ಜೀವಕ್ಕೇನೂ ಅಪಾಯವಾಗಿಲ್ಲ. ನಾನೊಮ್ಮೆ ಹೋಟೆಲಿನಲ್ಲಿ ವಿಚಾರಿಸುತ್ತೇನೆ."

ನಾವು ಅಲ್ಲಿಂದ ಹೊರಟೆವು.

***

ಮರುದಿನ ಬೆಳಿಗ್ಗೆ, ಕರಮಚಂದ ಬೋಪಣ್ಣನ ಕರೆವಿವರಗಳ ಮೇಲೆ ನಜರು ಹರಿಸುತ್ತಾ ಇದ್ದ.

"ಬೋಪಣ್ಣ ನಾಪತ್ತೆಯಾಗುವ ಹಿಂದಿನ ದಿನ, ಸುಬ್ರಮಣಿ ಅನ್ನುವವ ನಾಲ್ಕು ಬಾರಿ ಕರೆ ಮಾಡಿದ್ದ!" ಕರಮಚಂದ ಉದ್ಗರಿಸಿದ.

"ಸುಬ್ರಮಣಿ! ಬೋಪಣ್ಣನ ಚೆಕ್ ಬುಕ್ಕಿನಲ್ಲಿ ಸುಬ್ರಮಣಿಗೆ ಎರಡು ಲಕ್ಷ ರೂಪಾಯಿ ಚೆಕ್ ನೀಡಿದ ವಿವರವಿತ್ತು. ಆದರೆ ಆ ಚೆಕ್ ಪಾವತಿಯಾಗದೆ, ಮೂರು ಬಾರಿ ಬೌನ್ಸ್ ಆಗಿದೆ! ಪ್ರಾಯಶಃ ಹಣ ವಸೂಲಿಗಾಗಿ ಸುಬ್ರಮಣಿ ಫೋನು ಮಾಡಿರಬಹುದು!" ನಾನು ಉತ್ಸಾಹದಿಂದ ಉಸುರಿದೆ.

"ಹೌದೇ? ಕುಮುದಳ ಹೇಳಿಕೆಯಂತೆ ಬೋಪಣ್ಣನಿಗೆ ಯಾವುದೇ ಸಾಲಗಳಿಲ್ಲ! ಸುಬ್ರಮಣಿಗೆ ಚೆಕ್ ಯಾಕೆ ಕೊಟ್ಟ?"

"ನಾವು ಆತನಿಗೇ ಕರೆ ಮಾಡಿ, ವಿಚಾರಿಸುವ." ಹಾಗೆಂದು, ನಾನು ಆತನಿಗೆ ಕರೆ ಮಾಡಿದೆ. ಆದರೆ ಆತನ ಮೊಬೈಲ್ ಸ್ವಿಚ್ ಆಫ್ ಆಗಿತ್ತು.

"ಬಿದ್ದಪ್ಪ, ಬೋಪಣ್ಣನ ಪಾಸ್ ಬುಕ್ಕಿನಲ್ಲಿ ಯಾವ ದಿನಾಂಕದಿಂದ ಎಂಟ್ರಿಗಳು ಉಂಟು?"

"ಆತನದು ಚೆಕ್ಕಿನ ವ್ಯವಹಾರ ಕಡಿಮೆಯಿರಬೇಕು. ನಾಲ್ಕು ವರ್ಷದಿಂದ ಒಂದೇ ಪಾಸ್ ಬುಕ್ಕು!"

"ಹಾಗಿದ್ರೆ, ಒಮ್ಮೆ ಸುಬ್ರಮಣಿಯನ್ನು ಅಗತ್ಯವಾಗಿ ಭೇಟಿಯಾಗಬೇಕು. ಹಾಗೆಯೇ, ಮಡಿಕೇರಿಯ ಕಾರಾಗೃಹದಲ್ಲೂ ಒಂದಿಷ್ಟು ಕೆಲಸವಿದೆ. ಕೋರ್ಟಿನ ಕೆಲಸವೆಲ್ಲಾ ನೀನೇ ನೋಡಿಕೊ. ನಾನು ಬರುವಾಗ ತಡವಾಗಬಹುದು."

ಹಾಗೆಂದು ಹೇಳಿ, ಕರಮಚಂದ ಕೆಲಕ್ಷಣಗಳಲ್ಲಿ ಹೊರಟ.

***

ಅಪರಾಹ್ನ ಮೂರು ಗಂಟೆಯ ಹೊತ್ತಿಗೆ ನ್ಯಾಯಾಲಯದಲ್ಲಿ ಆಪಾದಿತನೊಬ್ಬನ ವಿಚಾರಣೆಯನ್ನು ಹಠಾತ್ತಾಗಿ ಮುಂದೂಡಬೇಕಾಗಿ ಬಂದಿತು. ಪೊಲೀಸರು ವಿಚಾರಣೆಗೆ ಹಾಜರು ಪಡಿಸಬೇಕಿತ್ತು. ಆದರೆ ಬಿಟ್ಟಂಗಾಲದ ಬಳಿ ಯಾವುದೋ ಶೂಟೌಟ್ ಆಗಿದ್ದರಿಂದ ಪೊಲೀಸರೆಲ್ಲಾ ಅಲ್ಲಿಗೆ ಹೋಗಿದ್ದಾರೆಂಬ ವರ್ತಮಾನ ಸಿಕ್ಕಿತು. ನಾನು ಕಚೇರಿಗೆ ಹಿಂದಿರುಗುವ ಯೋಚನೆಯಲ್ಲಿದ್ದಾಗ ಕರಮಚಂದನ ಕರೆ ಬಂದಿತು. ಆತ ಮಡಿಕೇರಿಯಿಂದ ಹಿಂದಿರುಗುತ್ತಿದ್ದು, ಬೋಪಣ್ಣನ ಮನೆಗೆ ಹೋಗೋಣ, ಕಾದಿರು ಎಂದ. ನನಗೆ ಅಚ್ಚರಿ. ಹಾದಿಯಲ್ಲಿ ಬಿಟ್ಟಂಗಾಲ ದಾಟಿದೊಡನೆ, ಒಂದಷ್ಟು ಪೊಲೀಸು ವಾಹನಗಳು ಕಂಡವು. ನಾನು ಆತನಿಗೆ ಶೂಟೌಟ್ ಬಗ್ಗೆ ತಿಳಿಸಿದೆ.

ಬೋಪಣ್ಣನ ಮನೆ ತಲಪುವಾಗ, ಗಂಟೆ ನಾಲ್ಕು ದಾಟಿತ್ತು. ಕದ ತೆರೆದ ಕುಮುದಗೆ ನಮ್ಮನ್ನು ಕಂಡು ಅಚ್ಚರಿ.

"ಸಾರ್! ಏನಾದ್ರೂ ಗೊತ್ತಾಯ್ತಾ?" ಆಕೆಯದ್ದು ಒಂದೇ ಪ್ರಶ್ನೆ.